ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014-15 : ದಿನಾಂಕ: 31-10-2014

# ಕನ್ನಡ ರಾಜ್ಯೋತ್ಸವದ ಶುಭಾಶಯಗಳು

## ಪತ್ರಿಕಾ ಪ್ರಕಟಣೆ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕ ರಾಜ್ಯೋತ್ಸವ ಸಮಾರಂಭ ಹಾಗೂ ಮಕ್ಕಳ ಮೇಳ:<br><br>ಧ್ವಜಾರೋಹಣ ಹಾಗೂ ರಾಜ್ಯೋತ್ಸವ ಸಂದೇಶ:<br><br>ಶ್ರೀ ಸಿದ್ದರಾಮಯ್ಯ,<br>ಮಾನ್ಯ ಮುಖ್ಯಮಂತ್ರಿಗಳು.<br>ಕರ್ನಾಟಕ ಸರ್ಕಾರ<br><br>ಮುಖ್ಯ ಅತಿಥಿಗಳು:<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು.<br><br>ಶ್ರೀಮತಿ ಶಾಂತಕುಮಾರಿ,<br>ಮಹಾಪೌರರು,<br>ಬೆಂಗಳೂರು.<br><br>ಶ್ರೀ ಕಿಮ್ಮನೆ ರತ್ನಾಕರ<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು | 01-11-2014<br>ಶನಿವಾರ<br>ಬೆಳಿಗ್ಗೆ<br>9-00 ಗಂಟೆಗೆ | ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣ,<br>ಬೆಂಗಳೂರು. |

| | | | |
|---|---|---|---|
| | <u>ಅಧ್ಯಕ್ಷತೆ:</u><br><br>ಶ್ರೀ ಆರ್. ರೋಷನ್ ಬೇಗ್,<br>ವಾರ್ತಾ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ<br>ಹಜ್ ಸಚಿವರು. | | |
| 2. | ಮಹಿಳಾ ವಿಶೇಷ ಘಟಕದ ಉದ್ಘಾಟನಾ ಸಮಾರಂಭ:<br><br>ಉದ್ಘಾಟನೆ:<br>ಶ್ರೀ ಸಿದ್ದರಾಮಯ್ಯ,<br>ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ಕರ್ನಾಟಕ ಸರ್ಕಾರ<br><br><u>ಅಧ್ಯಕ್ಷತೆ:</u><br><br>ಶ್ರೀ ಆರ್. ರೋಷನ್ ಬೇಗ್,<br>ವಾರ್ತಾ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ<br>ಹಜ್ ಸಚಿವರು.<br><br>ಯೋಜನಾ ಕಿರು ಹೊತ್ತಿಗೆ ಬಿಡುಗಡೆ:<br><br>ಶ್ರೀಮತಿ ಉಮಾಶ್ರೀ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು. | 01–11–2014<br>ಶನಿವಾರ<br>ಮಧ್ಯಾಹ್ನ<br>12–30 ಗಂಟೆಗೆ | ಬೌರಿಂಗ್ ಮತ್ತು ಲೇಡಿ ಕರ್ಜನ್<br>ಆಸ್ಪತ್ರೆಯ ಆವರಣ,<br>ಶಿವಾಜಿನಗರ,<br>ಬೆಂಗಳೂರು. |
| 3. | ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ"<br><br><u>ಪ್ರಶಸ್ತಿ ಪ್ರದಾನ:</u><br><br>ಶ್ರೀ ಸಿದ್ದರಾಮಯ್ಯ,<br>ಮಾನ್ಯ ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ<br><br><u>ಅಧ್ಯಕ್ಷತೆ:</u><br><br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು<br><br>ವಿ.ಸೂ: ಈ ಕಾರ್ಯಕ್ರಮದ ಪ್ರವೇಶಕ್ಕೆ | 01–11–2014<br>ಶನಿವಾರ<br>ಸಂಜೆ<br>6–30 ಗಂಟೆಗೆ | ರವೀಂದ್ರ ಕಲಾಕ್ಷೇತ್ರ,<br>ಜೆ.ಸಿ. ರಸ್ತೆ,<br>ಬೆಂಗಳೂರು. |

| | | | |
|---|---|---|---|
| | ಆಮಂತ್ರಣ ಪತ್ರಿಕೆ ಕಡ್ಡಾಯ<br><br>ಸಂಪರ್ಕ: ಶ್ರೀ ಕೆ.ಬಿ. ಕಿರಣ್ ಸಿಂಗ್,<br>ಮೊ. ಸಂಖ್ಯೆ: 9448457687 | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಪ್ರತಿಜ್ಞಾ ವಿಧಿ ಬೋಧನೆ

**ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)**

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಕೇಂದ್ರ ರೈಲ್ವೆ ಸಚಿವ ಶ್ರೀ ಡಿ.ವಿ. ಸದಾನಂದ ಗೌಡ, ಲೋಕೋಪಯೋಗಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ತಾರಾ ಅನೂರಾಧ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಶ್ರೀ ವಿ. ಉಮೇಶ್ ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳು ಸಚಿವಾಲಯದ ಸಿಬ್ಬಂದಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಪ್ರತಿಜ್ಞಾ ವಿಧಿ ಬೋಧನೆಗೂ ಮುನ್ನ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಕೇಂದ್ರ ರೈಲ್ವೇ ಸಚಿವ ಶ್ರೀ ಡಿ.ವಿ. ಸದಾನಂದ ಗೌಡ ಅವರು ಮಾಜಿ ಉಪ ಉಪ ಪ್ರಧಾನ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆ ಪ್ರಯುಕ್ತ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಬಾಬು:ಕೆಪಿಪಿ:ಜಿಪಿಆರ್

## ಪರೀಕ್ಷಾ ಫಲಿತಾಂಶ

**ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಜುಲೈ 2014 ರ ಮಾಹೆಯಲ್ಲಿ ನಡೆಸಿದ ಪ್ರಥಮ, ದ್ವಿತೀಯ ಡಿ.ಇಡಿ ಮತ್ತು ಪಿಪಿಟಿ ಮುಖ್ಯ ಪರೀಕ್ಷೆಗಳ ಫಲಿತಾಂಶ ಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಿಗೆ ಕಳುಹಿಸಲಾಗಿದೆ. ಸಂಬಂಧಿಸಿದ ಡಿ.ಇಡಿ ಮತ್ತು ಪಿಪಿಟಿ ಸಂಸ್ಥೆಗಳ ಪ್ರಾಂಶುಪಾಲರು ಫಲಿತಾಂಶ ಪಟ್ಟಿಯನ್ನು ಆಯಾ ಡಯಟ್‌ಗಳಿಂದ ಪಡೆದು ದಿನಾಂಕ 03-11-2014 ರಂದು ಮಧ್ಯಾಹ್ನ 2.00 ಗಂಟೆಗೆ ಫಲಿತಾಂಶವನ್ನು ಆಯಾ ಸಂಸ್ಥೆಗಳಲ್ಲಿ ಪ್ರಕಟಿಸಲು ತಿಳಿಸಿದೆ.

ಬಾಬು:ಬಿಜಿಪಿ:ಜಿಪಿಆರ್

## ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ 'ಸಿ' ವೃಂದದ ವಾಹನ ಚಾಲಕ (ಸಿವಿಲ್) ಬ್ಯಾಕ್‌ಲಾಗ್ – 02 ಹುದ್ದೆಗಳ ಅಂತಿಮ/ಹೆಚ್ಚುವರಿ ಆಯ್ಕೆಪಟ್ಟಿಯನ್ನು ಲೋಕಾಯುಕ್ತ ಸಂಸ್ಥೆಯ ವೆಬ್‌ಸೈಟ್ www.lokayukta.kar.nic.in ರಲ್ಲಿ ಹಾಗೂ ಕರ್ನಾಟಕ ಲೋಕಾಯುಕ್ತ ಕೇಂದ್ರ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಬಾಬು:ಜಿಪಿಆರ್.

# Results

Bangalore, October 31 (Karnataka Information)

Results of I & II year D.Ed and PPT Examination conducted by Karnataka Secondary Education Examination Board, Bangalore during July-2014 are sent to all the DIET's in the state. Concerned principals of D.Ed & PPT institutions are informed to collect the results from concerned DIET's and to announce the results on 3-11-2014 at 2.00 pm in the respective institutes says a official press release.

babu/km

# Selection list announced

Bangalore, October 31 (Karnataka Information)

Final Additional Selection list for the Post of Driver (Civil) Backlog-(02-Posts) in the Department of Karnataka Lokayukta is announced at the official notice board of the Head office, M.S. Building, Bangalore. For details visit our website www.lokayukta.kar.nic.in

babu/km